ಉಲ್ಲಾಳದ ರಾಷ್ಟ್ರೀಯ ಹೆದ್ದಾರಿ 17 ರ ನೇತ್ರಾವತಿ ಸೇತುವೆ ಶಿಥಿಲಗೊಂಡಿರುವುದು

182 (277) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ - 17 ರಲ್ಲಿ ಇರುವ ಒಟ್ಟು ಸೇತುವೆಗಳೆಷ್ಟು? ಈ ಸೇತುವೆಗಳು ನಿರ್ಮಾಣಗೊಂಡು ಎಷ್ಟು ವರ್ಷಗಳಾಗಿವೇ?

ಆ) ಉಲ್ಲಾಳದ ರಾಷ್ಟ್ರೀಯ ಹೆದ್ದಾರಿ - 17ರ ನೇತ್ರಾವತಿ ಸೇತುವೆಯ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಉಲ್ಲಾಳದ ಸೇತುವೆಯ ಕಂಬದ ಜೋಡಣಾ ಪಟ್ಟಿಗಳು ಸೇತುವೆಯ ಮೇಲ್ಬಾಗದಲ್ಲಿ (ಸರಪೇಸ್) ಸರಳುಗಳು ಎದ್ದಿರುವುದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿರುವುದರಿಂದ ಪರ್ಯಾಯ ವ್ಯವಸ್ಥೆ ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಈ) ಇತ್ತೀಚೆಗೆ ದಿನಾಂಕ 18-2-1998 ರಂದು ಕೇಂದ್ರ ಸರ್ಕಾರದ ''ಸರಪೇಸ್ ಆಫ್ ಇಂಡಿಯಾ'' ರವರು ಸಮೀಕ್ಷೆ ನಡೆಸಿರುವ ವರದಿಯ ವಿವರಗಳೇನು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯರಾಷ್ಟ್ರೀಯ ಹೆದ್ದಾರಿ ಸಂಖ್ಯೆ - 17 ರಲ್ಲಿ ಒಟ್ಟು ಮೂವತ್ತನಾಲ್ಕು ಸೇತುವೆಗಳು ಇರುತ್ತವೆ. ಇವುಗಳಲ್ಲಿ ಮೂರು ಸೇತುವೆಗಳು 1955-60 ರಲ್ಲಿ, ಇಪ್ಪತ್ತೊಂದು ಸೇತುವೆಗಳು 1960-65 ರಲ್ಲಿ, ಒಂಭತ್ತು ಸೇತುವೆಗಳು 1965-70ರಲ್ಲಿ, ಹಾಗೂ ಒಂದು ಸೇತುವೆ 1971ರಲ್ಲಿ ನಿರ್ಮಾಣವಾಗಿರುತ್ತವೆ.

ಆ) ಇಲ್ಲ

ಇ) ಸದರಿ ಸೇತುವೆಯ ಹೆನ್ನರಡನೇ ಅಂಕರಣದ ಒಂದು ಜೋಡಣಾ ಪಟ್ಟಿಯ ಕಬ್ಬಿಣದ ಪಟ್ಟಿ ಸಡಿಲಗೊಂಡಿದ್ದು, ಇದನ್ನು ಕೂಡಲೇ ಸರಿಪಡಿಸಲಾಗಿತ್ತದೆ. ಹಾಗೂ ಈಗ ವಾಹನ ಸಂಚಾರಕ್ಕೆ ಯಾವುದೇ ಅಡಚಣೆ ಇರುವುದಿಲ್ಲ.

ಈ) 1998ನೇ ಫೆಬ್ರವರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಎಲ್ಲಾ ಸೇತುವೆಗಳನ್ನು ಕೇಂದ್ರ ಭೂ ಸಾರಿಗೆ ಸಚಿವಾಲಯದ ಮೊಬೈಲ್ ಬ್ರಿಡ್ಜ್ ಇನ್ಸ್‌ಪೆಕ್ಷನ್ ಯೂನಿಟ್'' ಉಪಯೋಗಿಸಿ, ಪರಿಶೀಲನೆ ನಡೆಸಲಾಗಿರುತ್ತವೆ. ಹಾಗೂ ಸೇತುವೆಗಳು ಸುಸ್ಥಿತಿಯಲ್ಲಿರುವುದನ್ನು ಖಚಿತಪಡಿಸಿಕೊಳ್ಳಲಾಗಿದೆ. ದಿನಾಂಕ 17 ಮತ್ತು 18ರ ಫೆಬ್ರವರಿಯ 1998ರಲ್ಲಿ ನೇತ್ರಾವತಿ ಸೇತುವೆಯನ್ನು ಪರೀಕ್ಷಿಸಲಾಗಿದ್ದು, ಸೇತುವೆಯಲ್ಲಿ ಯಾವ ದೋಷವೂ ಕಂಡು ಬರುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಗೆ ಉದ್ಯೋಗಕ್ಕಾಗಿ ವಲಸೆ ಬಂದ ಕೂಲಿ ಕಾರ್ಮಿಕರು

183 (464) ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಉದ್ಯೋಗಕ್ಕಾಗಿ ಧಾರವಾಡ ಬಿಜಾಪುರ ಅಲ್ಲದೆ ರಾಜ್ಯದ ಇತರೆಡೆಗಳಿಂದ ವಲಸೆ ಬಂದ ಕೂಲಿ ಕಾರ್ಮಿಕ ಸಂಖ್ಯೆ ಎಷ್ಟು?

ಆ) ದಕ್ಷಿಣ ಕನ್ನಡ ಜಿಲ್ಲೆ ಕೂಲಿ ಕಾರ್ಮಿಕರ ವಸತಿ ವ್ಯವಸ್ಥೆಗಳ ಕುರಿತು ಸರ್ಕಾರದ ನಿಲುವೇನು?

ಇ) ವಸತಿಹೀನ ಕೂಲಿ ಕಾರ್ಮಿಕರಿಗೆ ಕೊಳಚೆ ಪ್ರದೇಶಗಳು ಹೆಚ್ಚುತ್ತಿರುವ ಕುರಿತು ಸರ್ಕಾರದ ಯಾವ ಕ್ರಮ ಕೈಗೊಂಡಿದೆ?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ಈ ಇಲಾಖೆಯು ಇಂತಹ ಅಂಕಿ ಅಂಶಗಳನ್ನು ನಿರ್ವಹಿಸುವುದಿಲ್ಲ. ಮತ್ತು ಮೇಲ್ವಿಚಾರಿಸುವುದಿಲ್ಲ.

ಆ) ದಕ್ಷಿಣ ಕನ್ನಡದ ಕಾರ್ಮಿಕರಿಗಾಗಿಯೇ ಪ್ರತ್ಯೇಕ ವಸತಿ ಯೋಜನೆಗಳು ಇಲ್ಲ. ಕಾರ್ಮಿಕರು ರಾಜ್ಯದ ಸಾಮಾನ್ಯ ವಸತಿ ಯೋಜನೆ ಅಡಿ ಅರ್ಹರಾಗಿದ್ದಲ್ಲಿ ವಸತಿ ಪಡೆಯಬಹುದು

ಆ) ದಕ್ಷಿಣ ಕನ್ನಡದ ಕಾರ್ಮಿಕರಿಗಾಗಿಯೇ ಪ್ರತ್ಯೇಕ ವಸತಿ ಯೋಜನೆಗಳು ಎಲ್ಲ. ಕಾರ್ಮಿಕರು ರಾಜ್ಯದ ಸಾಮಾನ್ಯ ವಸತಿ ಯೋಜನೆ ಅಡಿ ಅರ್ಹರಾಗಿದ್ದಲ್ಲಿ ವಸತಿ ಪಡೆಯಬಹುದು.

ಇ) ಪೋಷಿತ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ನಿವಾಸಿಗಳಿಗೆ ಕನಿಷ್ಟ ಮೂಲಭೂತ ಸೌಲಭ್ಯಗಳಾದ ನೀರು, ರಸ್ತೆ, ಶೌಚಾಲಯ, ವಿದ್ಯುತ್ ಚರಂಡಿಗಳನ್ನು ನೀಡಲಾಗುತ್ತದೆ. ವಲಸೆ ಬಂದ ಕೂಲಿ ಕಾರ್ಮಿಕರಿಗಾಗಿ ಪ್ರತ್ಯೇಕ ವ್ಯವಸ್ಥೆ ಇರುವುದಿಲ್ಲ. ಆದರೆ ಇವರು ಪೋಷಿತ ಕೊಳಚೆ ಪ್ರದೇಶದಲ್ಲಿ ವಾಸವಿದ್ದಲ್ಲಿ ಮೂಲಭೂತ ಸೌಲಭ್ಯಗಳು ಲಭ್ಯವಾಗುತ್ತದೆ.

ಉಳ್ಳಾಲ ಕೋಟೆಪುರದ ಬಳಿ ಮೀನುಗಾರಿಕೆ ಜಟ್ಟಿ ಸ್ಥಾಪನೆ

184 (463) ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಉಳ್ಳಾಲ ಕೋಟೇಪುರದ ಬಳಿ ಮೀನುಗಾರಿಕಾ ಜಟ್ಟಿ ಸ್ಥಾಪನೆಯ ಕುರಿತು ಸರ್ಕಾರ ಏನಾದರೂ ಯೋಚಿಸಿದೆಯೇ;

ಆ) 1970 ರ ದಶಕದಲ್ಲಿ ನೇತ್ರಾವತಿ ಎಡದಂಡೆಯಲ್ಲಿ ಮೀನುಗಾರಿಕಾ ಜಟ್ಟಿಗೆ ಶಂಕುಸ್ಥಾಪನೆಯ ಮಾಡಲಾಗಿತ್ತು; ಸರ್ಕಾರ ಈ ಕುರಿತು ಕಾಮಗಾರಿಯನ್ನು ವಿಳಂಬಿಸುತ್ತಿರುವುದೇಕೆ?

ಶ್ರೀ ಕೆ. ಜಯಪ್ರಕಾಶ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಸದ್ಯಕೆ ಇಲ್ಲ

ಆ) ನೇತ್ರಾವತಿ ನದಿಯ ಎಡದಂಡೆ ಉಳ್ಳಾಲ ಕೋಟೇ ಪುರದಲ್ಲಿ ಜಟ್ಟಿ ನಿರ್ಮಿಸಲು 1970ರಲ್ಲಿ ಪ್ರಸ್ತಾಪಿಸಲಾಗಿದ್ದರೂ ಸಮೀಕ್ಷೆಯ ನಂತರ ತಾಂತ್ರಿಕ ನೆಲೆಯಲ್ಲಿ ಈ ಸ್ಥಳ ಸೂಕ್ತವಲ್ಲವೆಂದು ತಿಳಿದು ಕಾಮಗಾರಿಯನ್ನು ಕೈಗೊಂಡಿಲ್ಲ. ಇಲ್ಲಿ ಜಟ್ಟಿ ಸ್ಥಾಪನೆಗೆ ಶಂಕು ಸ್ಥಾಪನೆ ಮಾಡಿದ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ.